# ಕತ್ರೀನಾ ಮದುವೆ ಯಾವಾಗ?



ಒಂದು ವರ್ಷದಲ್ಲಿ ನಾಲ್ಕು ದೊಡ್ಡ ಮದುವೆಗಳು ಬಾಲಿವುಡ್‌ನಲ್ಲಿ ಸುದ್ದಿ ಮಾಡಿವೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಅನೂಷ್ಕಾ ಮತ್ತು ವಿರಾಟ್ ಕೊಹ್ಲಿ ಅವರ ಮದುವೆಯಿಂದ ಆರಂಭವಾದ ಈ ಸರಣಿ ಮದುವೆ, ಈ ಡಿಸೆಂಬರ್ ನಂತರವೂ ಮುಂದುವರಿಯುವ ಸಾಧ್ಯತೆ ಇದೆ. ಏಕೆಂದರೆ ಹಸೆಮಣೆ ಏರುವ ವಧುಗಳ ಪಟ್ಟಿಯಲ್ಲಿ ಕತ್ರೀನಾ ಕೈಫ್ ಮುಂಚೂಣಿಯಲ್ಲಿದ್ದಾಳೆ. ಕಳೆದ ವರ್ಷ ಅನೂಷ್ಕಾ ಮದುವೆಯಾದಾಗ ಆಕೆಗೆ 29 ವರ್ಷ. ಆ ಬಳಿಕ ಅನಿಲ್ ಕಪೂರ್ ಮಗಳು ಸೋನಂ ಮದುವೆಯಾದಳು. ಆಗ ಆಕೆಯ ವಯಸ್ಸು 32 ವರ್ಷ. ತೀರಾ ಇತ್ತೀಚೆಗೆ ಮದುವೆಯಾದವರಲ್ಲಿ ದೀಪಿಕಾ 33ರ ಹರೆಯದಲ್ಲಿ ಮದುವೆಯಾದರೆ, ಪ್ರಿಯಾಂಕಾ ಚೋಪ್ರಾ 36ರ ಹರೆಯದಲ್ಲಿ ಮದುವೆಯಾಗಿದ್ದಾಳೆ. ಕತ್ರೀನಾ ಕೈಫ್ ವಯಸ್ಸು ಈಗ 35. ಹಾಗಾಗಿ ಮುಂದಿನ ತಾರಾ ಮದುವೆ ಯಾರದ್ದು ಎನ್ನುವ ಪ್ರಶ್ನೆಯನ್ನು ಬಾಲಿವುಡ್ ಪಂಡಿತರ ಮುಂದಿಟ್ಟರೆ, ಕತ್ರೀನಾಳದ್ದು ಎನ್ನುವ ಉತ್ತರ ಸಿಗುತ್ತಿದೆ.

ಇತ್ತೀಚಿನ ತಾರಾ ಮದುವೆಗಳ ಬಗ್ಗೆ ಕತ್ರೀನಾಳನ್ನು ಪತ್ರಕರ್ತರು ಪ್ರಶ್ನಿಸಿದಾಗ ಸಿಕ್ಕ ಉತ್ತರವೂ ಮಾರ್ಮಿಕವಾಗಿದೆ. ಒಂದು ವರ್ಷದ ಹಿಂದೆ ನಡೆದ ತನ್ನ ಮದುವೆಯನ್ನು ನೆನಪಿಸಿಕೊಂಡು ಅನೂಷ್ಕಾ, ‘ಈ ವರ್ಷವಿಡೀ ಸ್ವರ್ಗಸದೃಶ ಅನುಭವ’ ಎಂದದ್ದು ಸುದ್ದಿಯಾಗಿದೆ. ದೀಪಿಕಾಗೆ ತನ್ನ ಮದುವೆಯ ಬಗ್ಗೆ ಕೇಳಿದಾಗ, ‘ಮ್ಯಾಜಿಕಲ್, ಸ್ಪೆಷಲ್’ ಎಂಬ ಉತ್ತರ ನೀಡಿದ್ದಾಳೆ. ಈ ಇಬ್ಬರ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯೆ ನೀಡಿದ ಕತ್ರೀನಾ, ‘ಎಲ್ಲರೂ ಪ್ರೀತಿಸಲ್ಪಡಲು ಬಯಸುತ್ತಾರೆ. ಮದುವೆ ಎನ್ನುವುದು ಪ್ರೀತಿಯ ರೊಮ್ಯಾಂಟಿಕ್ ನೆನಪು. ಒಂದು ವರ್ಷದಲ್ಲಿ ಮದುವೆಯಾದ ನಾಲ್ಕೂ ಜೋಡಿಗಳನ್ನು ನೋಡಿ ನನಗೆ ಸಂತೋಷವಾಗುತ್ತಿದೆ. ಮದುವೆ ಎನ್ನುವುದು ಭಾವುಕ ಕ್ಷಣವೂ ಹೌದು’ ಎಂದು ಉತ್ತರಿಸಿದ್ದಾಳೆ.

ಕತ್ರೀನಾಳ ಈ ಉತ್ತರದಿಂದ ಪತ್ರಕರ್ತರು ತೃಪ್ತರಾಗಿಲ್ಲ. ಏಕೆಂದರೆ ಈ ಉತ್ತರದಲ್ಲಿ ಕತ್ರೀನಾಳ ಮದುವೆ ಯಾವಾಗ ಎನ್ನುವುದರ ಸುಳಿವು ಇಲ್ಲ. ಅದಕ್ಕೂ ಆಕೆ ನೀಡಿದ ಪರೋಕ್ಷ ಉತ್ತರವೆಂದರೆ, ‘ಮದುವೆಗಳಿಗೆ ಹಾಜರಾಗುವುದು ನನಗೆ ಸಂತೋಷದ ಅನುಭವ ನೀಡುತ್ತದೆ. ಇವರೆಲ್ಲರೂ ನನ್ನ ಉದ್ಯಮದ ಸಹೋದ್ಯೋಗಿಗಳು. ಆದರೆ ಒಪ್ಪಿಕೊಂಡ ಕೆಲಸಗಳನ್ನು ಮುಗಿಸುವುದು ನನ್ನ ಮೊದಲ ಆದ್ಯತೆ.’

ಈ ಉತ್ತರ ಕೇಳಿದರೆ ಕತ್ರೀನಾ ಕೈತುಂಬ ಕೆಲಸ ಇದೆ ಎಂಬ ಭಾವನೆ ಬರುತ್ತದೆ. ಅದು ನಿಜವೂ ಹೌದು. ಸದ್ಯಕ್ಕೆ ಕತ್ರೀನಾ ಒಪ್ಪಿಕೊಂಡ ಸಿನಿಮಾಗಳ ಸಂಖ್ಯೆ 10ನ್ನು ದಾಟಿದೆ. ಸಲ್ಮಾನ್ ಜೊತೆಗಿನ ‘ಭಾರತ್’ನಿಂದ ಶುರುವಾಗುವ ಈ ಪಟ್ಟಿ ರಾಜನೀತಿ–2, ಬಂಧುವಾ, ರಾತ್ ಬಾತಿ, ದೋಸ್ತಾನಾ–2, ಜುವೆಲ್ಸ್ ಆಫ್ ಇಂಡಿಯಾ, ಪಾರ್ಟ್‌ನರ್–2.. ಹೀಗೆ ಮುಂದುವರಿಯುತ್ತದೆ. ಈ ಪಟ್ಟಿ ನೋಡಿದರೆ ಇನ್ನೂ ಎರಡು ವರ್ಷ ಕತ್ರೀನಾ ಮದುವೆ ಆಗುವ ಹಾಗಿಲ್ಲ. ಪ್ರಿಯಾಂಕಾ, ದೀಪಿಕಾ ಮುಂತಾದವರ ಕೈಯಲ್ಲಿ 2–3 ಸಿನಿಮಾಗಳು ಇರಬಹುದು. ಅವರಿಗೆ ಹೋಲಿಸಿದರೆ, ಕತ್ರೀನಾ ವರ್ಷಪೂರ್ತಿ ಬ್ಯುಸಿ.

ಸಲ್ಮಾನ್ ಜೊತೆಗೆ ಕತ್ರೀನಾಳ ನಿಕಟ ಸಂಬಂಧ ಒಂದೆರಡು ವರ್ಷ ಸುದ್ದಿ ಮಾಡಿತ್ತು. ಆದರೆ ಆ ಬಳಿಕ ಅದು ಕಿತ್ತುಹೋಯಿತು. ಈಗ ಬಾಲಿವುಡ್‌ನಲ್ಲಿ ಮದುವೆಯಾಗದೆ ಉಳಿದಿರುವ ಖ್ಯಾತನಾಮನೆಂದರೆ ಸಲ್ಮಾನ್ ಮಾತ್ರ. ಇವರಿಬ್ಬರೂ ಮತ್ತೆ ಪ್ರೀತಿಸಿ ಮದುವೆ ಆಗಬಹುದೆ? ಕತ್ರೀನಾ ಒಂದು ಕಾಲದಲ್ಲಿ ಬ್ರಿಟನ್ನಿನ ಟಾಪ್ ಮಾಡೆಲ್ ಆಗಿದ್ದಾಕೆ. ಮಾಡೆಲಿಂಗ್ ಕ್ಷೇತ್ರದಲ್ಲೇ ಆಕೆಗೆ ಸಾಕಷ್ಟು ನಿಕಟ ಸ್ನೇಹಿತರಿದ್ದಾರೆ. ಹಾಗಾಗಿ ಪ್ರಿಯಾಂಕಾಳಂತೆ ಈಕೆಯದ್ದೂ ಅಂತರರಾಷ್ಟ್ರೀಯ ಮದುವೆ ಆಗಬಹುದು ಎನ್ನುವವರೂ ಇದ್ದಾರೆ.

■ ಬಿಂದು